# ಸಂತತ ಹನ್ನೆರಡು ಕೋಟಿ ಸುವರ್ಣ ಪುಷ್ಪ ಸಮರ್ಪಿಸಲು

**(ಶ್ರೀ ತುಳಸೀ ಮಹಿಮಾ ಸುಳಾದಿ)**

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru.
3. **Note:** The wordings given without highlights are as per the above books. Wordings in both references above matches fully.
4. **Note:** The wordings given in yellow highlights are as per the singer.

**ರಾಗ ಮಲಯ ಮಾರುತ**

**ಧ್ರುವತಾಳ**

| | |
|---|---|
| ಸಂತತ ಹನ್ನೆರಡು ಕೋಟಿ ಸುವರ್ಣ ಪುಷ್ಪ ಸಮರ್ಪಿಸಲು | ಸಂತತ ಹನ್ನೆರಡು ಕೋಟಿ ಸುವರ್ಣದ ಪುಷ್ಪ |
| ಅಂತಾ ಫಲದಿ ಕೋಟಿ ಕೋಟಿ ಗುಣಿತ ತುಳಸೀ ದಳಕೆ | ಸಮರ್ಪಿಸಲು ಅಂಥ ಫಲದಿ ಕೋಟಿ ಗುಣಿತ ಅರ್ಧ |
| ತಂತು ಮಾತ್ರ ಭಕ್ತಿಯಲಿ ತವಕದಿ ಪೂಜಿಸು ಶ್ರೀ– | ತುಳಸೀ ದಳಕೆ ಕಿಂತು ಮಾತ್ರದಿ ಭಕುತಿಯಿಂದ |
| ಮಂತ ಶ್ರೀ ಪುರಂದರ ವಿಠಲ ವೈಕುಂಠವ ನೀವ ॥ 1 ॥ | ಸಂತತ ನಮಿಸಲು ಶ್ರೀ ಪುರಂದರ ವಿಠ್ಠಲ ವೈಕುಂಠವನೀವಾ |

**ಮಟ್ಟತಾಳ**

| | |
|---|---|
| ಆದಿವಾರದಿ ಸಂಜೆಯಲಿ ರಾತ್ರಿಯಲಿ | ಆದಿವಾರದಲ್ಲಿ ಸಂಜೆ ರಾತ್ರಿಯಲ್ಲಿ |
| ಅಂಗಾರಕ ಶುಕ್ರವಾರದಲ್ಲಿ | ಅಂಗಾರಕ ಶುಕ್ರವಾರದಲ್ಲಿ |
| ಆದಿತ್ಯ ಸೋಮಗ್ರಹಣ ಅಮವಾಸ್ಯೆ ಹುಣ್ಣಿವೆ | ವೈಧೃತಿ ವ್ಯತಿಪಾತ ಸಂಕ್ರಮಣಗಳಲ್ಲಿ |
| ದ್ವಾದಶಿಯಲಿ ಸಾದರಾರ್ಚಿತ ಜಯಂತಿಗಳಲಿ | ತುಳಸಿ ತೆಗೆದರೆ ಶ್ರೀ ಪುರಂದರ ವಿಠ್ಠಲ ಮುನಿವಾ |
| ವೈಧೃತಿ ವ್ಯತಿಪಾತ ಸಂಕ್ರಾಂತಿಗಳಲಿ ಶ್ರೀ ಪು– | |
| ರಂದರ ವಿಠಲ ಮುನಿವ ಶ್ರೀ ತುಳಸಿಯ ತೆಗೆದರೆ ॥ 2 ॥ | |

**ತ್ರಿಪುಟ ತಾಳ**

ಸಾರಂಗಧರನಿಗೆ ಸಂವತ್ಸರದ ತುಳಸಿ
ಆರು ತಿಂಗಳ ಬಿಲ್ವ ಆಹೋದು ಅಚ್ಯುತನರ್ಚನೆಗೆ
ಕಾರುಣ್ಯ ಮೂರುತಿಗೆ ಕಮಲ ಏಳು ದಿನವಹುದು
ಪುರಂದರ ವಿಠಲನಿಗೆ ದಿನ ದಿನದಿ ಕಣಗಿಲ
ಆಹೋದು ಸತತ ॥ 3 ॥

ಮೂರು ದಿನ ಕಣಗಲ ಪುಷ್ಪ
ಆರು ತಿಂಗಳ ಬಿಲ್ವ ಸಂವತ್ಸರದ ತುಳಸೀ
ಮೂರು ತಿಂಗಳ ಕಮಲಾ ಅಚ್ಯುತಾರ್ಚನೆ
ಬಾಹುದು ಶ್ರೀ ಪುರಂದರ ವಿಠ್ಠಲ ॥ 3 ॥

**ಅಟ್ಟತಾಳ**

ಇಲ್ಲದಿದ್ದರೆ ಚಿಗುರು ತುಳಸಿ ಅದು
ಇಲ್ಲದಿದ್ದರೆ ಮುಗುಳು ತೆನೆಯು ಅದು
ಇಲ್ಲದಿದ್ದರೆ ತುಳಸಿ ಎಲೆಯು ಅದು
ಇಲ್ಲದಿದ್ದರೆ ಒಣಗಿದ ಕಾಷ್ಟ ಅದು
ಇಲ್ಲದಿದ್ದರೆ ತುಳಸಿಯ ಬುಡದ ಮಣ್ಣು ಅದು
ಇಲ್ಲದಿದ್ದರೆ ತುಳಸಿ ತುಳಸಿ ಎಂದು ಕೂಗಿದರೆ
ನಮ್ಮ ಪುರಂದರ ವಿಠಲ ಒಲಿವ ಕಾಣಿರೊ ॥ 4 ॥

ಇಲ್ಲದಿದ್ದರೆ ಚಿಗುರು ಎಲಿಯು
ಇಲ್ಲದಿದ್ದರೆ ಬೇರು ಮೃತಿಕೆ
ಇಲ್ಲದಿದ್ದರೆ ಬರಡು ಕಟ್ಟಿಗಿ ಅದು
ಇಲ್ಲದಿದ್ದರೆ ತುಳಸೀ ತುಳಸೀ ಎಂದು ಕೂಗಿದರೆ ಸಾಕು
ಎಲ್ಲ ವಸ್ತುಗಳಿದ್ದು ತುಳಸಿ ಇಲ್ಲದಿದ್ದರೆ
ಶ್ರೀ ಪುರಂದರ ವಿಠ್ಠಲ ಮುನಿದು
ಎಲ್ಲವಗಳೀಡಾಡುವುವು

**ಝಂಪೆತಾಳ**

ಶ್ರೀರಮಣನು ತನ್ನ ಶ್ರೀಯನ್ನೆ ಕೂಡಿ
ಶ್ರೀವತ್ಸ ಕೌಸ್ತುಭ ಮಾಲೆ ವೈಜಯಂತಿಹಾರ–ಏ–
ಕಾವಳಿಯನು ಒಲ್ಲೆ ತುಳಸಿ ಎನ್ನವಳೆಂದ
ಪುರಂದರ ವಿಠಲ ॥ 5 ॥

**ಆದಿತಾಳ**

ಒಂದೇ ಒಂದು ಬೆರಳ ಜಪ
ಒಂದೇ ಐದು ಗೆರೆಯ ಜಪ
ಒಂದೇ ಹತ್ತು ಪುತ್ರ ಜೀವಿಮಣಿಯ ಜಪ
ಒಂದೇ ನೂರು ಶಂಖಮಣಿಯ ಜಪ
ಒಂದೇ ಸಾವಿರ ಹವಳದ ಜಪ
ಒಂದೇ ಹತ್ತು ಸಾವಿರ ಮುತ್ತಿನ ಮಣಿಯ ಜಪ
ಒಂದೇ ಹತ್ತು ಲಕ್ಷ ಸುವರ್ಣ ಮಣಿಯ ಜಪ
ಒಂದು ಕೋಟಿ ದರ್ಭೆ ಬೆಟ್ಟಿನ ಜಪ
ಒಂದೇ ಅನಂತ ಶ್ರೀ ತುಳಸೀ ಮಣಿಯ ಜಪ–
ವೆಂದು ಪುರಂದರ ವಿಠಲ ಪೇಳ್ದ ॥ 6 ॥

ಒಂದು ಒಂದು ಬೆರಳು ಜಪ
ಒಂದೆ ಐದು ಬೆರಳು ಗೆರೆಯ ಜಪ
ಒಂದೇ ಹತ್ತು ಪುಥುರಂಜ ಮಣಿ ಜಪ
ಒಂದೇ ಕೋಟಿ ದರ್ಭೆ ಗಂಟಿನ ಜಪ
ಒಂದೆ ಅನಂತ ತುಳಸಿ ಮಣಿಯ ಜಪ ಹೀ -
ಗೆಂದು ಶ್ರೀ ಪುರಂದರ ವಿಠ್ಠಲ ನೇಮಿಸಿದಾ

**ಜತೆ**

ಸ್ನಾನದಾನಕೆ ತುಳಸಿ ಪ್ರಯೋಜನ ತುಳಸಿ
ಪುರಂದರ ವಿಠಲಗೆ ಅತಿ ಪ್ರಿಯೆ ತುಳಸಿ ॥ 7 ॥

ಸ್ನಾನ ದಾನಕೆ ತುಳಸಿ ದಳ ಪ್ರಯೋಜನಕೆ ತುಳಸಿ
ಶ್ರೀ ಪುರಂದರ ವಿಠ್ಠಲಗೆ ಅತಿ ಪ್ರೀಯ ತುಳಸೀ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಸುಳಾದಿಯಲ್ಲಿ ದಾಸರು ತುಳಸಿಯ ಮಾಹಾತ್ಮ್ಯವನ್ನು ಬೇರೆ ಬೇರೆ ರೀತಿಯಲ್ಲಿ ವಿವರಿಸಿ ಅದನ್ನು ಪೂಜೆಗಾಗಿ ಬೆಳೆಸುವ ರೀತಿ - ನೀತಿಗಳನ್ನೂ ಹೇಳಿದ್ದಾರೆ.

೧. **ತುಳಸಿಯನ್ನು** ತೆಗೆಯುವದಕ್ಕೆ ನಿಷಿದ್ದವಾದ ದಿನಗಳನ್ನು ಇದರಲ್ಲಿ ಸೂಚಿಸಿದ್ದಾರೆ.

೨. **ಅಂಗಾರಕ** = ಮಂಗಳವಾರ

**ಜಯಂತಿ** = ದೇವರ ಹಟ್ಟುಹಬ್ಬ (ಉದಾ = ರಾಮನವಮಿ, ಕೃಷ್ಣಾಷ್ಟಮಿ, ಇತ್ಯಾದಿ)

**ವೈಧೃತಿ** = ಸೂರ್ಯ ಚಂದ್ರರ ಒಂದು ಬಗೆಯ ಯೋಗ,

**ವ್ಯತಿಪಾತ** = ಜ್ಯೋತಿಷ್ ಶಾಸ್ತ್ರದಲ್ಲಿ ಹೇಳಿದ ೧೮ ಯೋಗಗಳಲ್ಲಿ ೧೭ ನೆಯದು.

೩. **ಸಂವತ್ಸರ** = ವರ್ಷ

**ಸಾರಂಗಧರ** = ವಿಷ್ಣು

**ವಿ.ಸೂ : -**

- ಒಂದೇ ಕೈ ಬೆರಳಿನಿಂದ ಮಾಡಿದ ಜಪಕ್ಕೆ ಒಂದು ಫಲ
- ಒಂದೇ ಬೆರಳ ಗೆರೆಯ ಜಪಕ್ಕೆ ಐದು ಮಡಿ ಫಲ
- ಒಂದು ಪುತ್ರಜೀವಿ ಮಣಿ ಜಪಕ್ಕೆ ಹತ್ತು ಮಡಿ ಫಲ
- ಒಂದು ಶಂಖ ಮಣಿಯ ಜಪಕ್ಕೆ ನೂರು ಮಡಿ ಫಲ
- ಒಂದು ಹವಳ ಮಣಿ ಜಪಕ್ಕೆ ಸಾವಿರ ಫಲ
- ಒಂದು ಮುತ್ತಿನ ಮಣಿ ಜಪಕ್ಕೆ ಹತ್ತು ಸಾವಿರ ಫಲ
- ಒಂದು ಸುವರ್ಣ ಮಣಿ ಜಪಕ್ಕೆ ಹತ್ತು ಲಕ್ಷ ಫಲ
- ದರ್ಭೆಯನ್ನು ಧರಿಸಿ ಮಾಡಿದ ಒಂದು ಜಪಕ್ಕೆ ಕೋಟಿ ಫಲ
- ತುಳಸಿ ಮಣಿಯ ಒಂದೇ ಒಂದು ಜಪಕ್ಕೆ ಅನಂತ ಫಲ

**Classification:** Suladi
**Name of Suladi:** srI tuLasi mahimA suLAdi
**Ankita:** purandara vittala
**Location:** NA
**Category:** Tulasi Song
**Sub-Category:** Vishnu, tulasi, bangara, vaikunta, achyuta, Ananta, japa, snana, dAna, archane, puje, huvu, dAna, srimanta
**Pravachana:** NA
**Explanation:** NA